# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ ಕಛೇರಿಯಲ್ಲಿ ದಿನಾಂಕ: 04-09-2021 ರಂದು ನಡೆದ ವಾರ್ಡ್ ಸಂಖ್ಯೆ: 112 ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ **ಸೆಪ್ಟೆಂಬರ್-2021**ರ ಮಾಹೆಯ ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 04-09-2021 ರಂದು ನಡೆಸಲಾಯಿತು.

## ಸಭೆಗೆ ಹಾಜರಿದ್ದವರ ವಿವರಗಳು

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಟಿ. ಡಿ. ಮಂಜುನಾಥ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು ವಾರ್ಡ್-112 (ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪ ವಿಭಾಗ) |
| 2 | ಎನ್.ಎಸ್. ಪ್ರಕಾಶ್ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 112 |
| 3 | ಕುಮಾರ್ | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯು.ಎಸ್.ಎಸ್.ಬಿ |
| 4 | ಮಂಜುನಾಥ | ಸಹಾಯಕ ಅಭಿಯಂತರರು ಎಸ್-3, ಬೆಸ್ಕಾಂ |
| 5 | ಡಾ॥ ಸೀಮಾ | ಆರೋಗ್ಯ ವೈದ್ಯಾಧಿಕಾರಿಗಳು |
| 6 | ಎಲ್. ಸಗಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ: 112 |
| 7 | ಪುರುಷೋತ್ತಮ | ಸಮಿತಿ ಸದಸ್ಯರು & ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ: 112 |
| 8 | ಮಮತ. ಎಂ.ಹೆಚ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 9 | ಶಶಿಕುಮಾರ್ | ಕೆಲಸ ಪರಿವೀಕ್ಷಕರು ವಾರ್ಡ್ ಸಂಖ್ಯೆ: 112 |
| 10 | ಪುನಿತ್ ಕುಮಾರ್ | ಬಿ.ಬಿ.ಎಂ.ಪಿ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ |

| ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಸಾರ್ವಜನಿಕರು | | |
|---|---|---|
| 1 | ಆರ್. ವಾಸು | ವಾರ್ಡ್ ಸಮಿತಿ ಸದಸ್ಯರು |
| 2 | ಪುಲಿಕೇಶಿ ರೆಡ್ಡಿ | ವಾರ್ಡ್ ಸಮಿತಿ ಸದಸ್ಯರು |
| 3 | ದೇವಣ್ಣ | ವಾರ್ಡ್ ಸಮಿತಿ ಸದಸ್ಯರು |
| 4 | ಪಿ. ಕುಮಾರ್ | ವಾರ್ಡ್ ಸಮಿತಿ ಸದಸ್ಯರು |

ದಿನಾಂಕ: 04-09-2021 ರಂದು ಪೂರ್ವಾಹ್ನ 10-30 ಗಂಟೆಗೆ ವಾರ್ಡ್ ಸಂಖ್ಯೆ: 112 ದೊಮ್ಮಲೂರು ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ. ಟಿ.ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಸಭೆಗೆ ಆಗಮಿಸಿದ್ದ ವಾರ್ಡ್ ಸಮಿತಿ ಸದಸ್ಯರುಗಳನ್ನು, ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ವಾರ್ಡಿನ ನಿವಾಸಿಗಳನ್ನು ಸಭೆಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

ಪು.ತಿ.ನೋ..

**ದಿನಾಂಕ: 04-09-2021ರ ಸಭೆಯಲ್ಲಿ ಸಾರ್ವಜನಿಕರು ಸಲ್ಲಿಸಿದ ಸಮಸ್ಯೆಗಳ ಮನವಿಗಳು ಹಾಗೂ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

| ಕ್ರ. ಸಂ | ಚರ್ಚಿಸಿದ ವಿಷಯಗಳು | ಕೈಗೊಂಡ ಕ್ರಮಗಳು |
|---|---|---|
| 1 | ಶ್ರೀಮತಿ. ಸುಜಾತ ರವರು ಮನವಿ ಸಲ್ಲಿಸಿ 12 ಮತ್ತು 13ನೇ ಮುಖ್ಯರಸ್ತೆಯಲ್ಲಿ ಟ್ರಾಫಿಕ್ ತೊಂದರೆ ಇರುತ್ತದೆ ಎಂದು ತಿಳಿಸಿರುತ್ತಾರೆ. | ಹಲಸೂರು ಸಂಚಾರ ಪೋಲೀಸ್ ರವರಿಗೆ ಈ ಬಗ್ಗೆ ಕ್ರಮಕೈಗೊಳ್ಳಲು ತಿಳಿಸಲಾಗಿರುತ್ತದೆ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಸಂಚಾರಿ ಪೋಲೀಸ್ ರವರು ವೈಟ್ ಟಾಪಿಂಗ್ ಕೆಲಸವು 100 ಅಡಿ ರಸ್ತೆಯಲ್ಲಿ ನಡೆಯುತ್ತಿದ್ದು, ಇದರಿಂದ ವಾಹನಗಳು 12 ಮತ್ತು 13ನೇ ಮುಖ್ಯರಸ್ತೆಗಳಲ್ಲಿ ವಾಹನದಟ್ಟಣೆಯಾಗುತ್ತಿರುತ್ತದೆ ಎಂದು ತಿಳಿಸಿದರು. ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. |
| 2 | ದೊಮ್ಮಲೂರು ವಾರ್ಡಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಕೋವಿಡ್-19ಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು. | ಸದರಿ ವಿಷಯದ ಬಗ್ಗೆ ವಾರ್ಡಿನಲ್ಲಿ ಹಾಲಿ ಒಟ್ಟು 68 ಪ್ರಕರಣಗಳಿದ್ದು, 7 ಕ್ಲಸ್ಟರ್‌ಗಳು ಹಾಗೂ 7 ಆಕ್ಟಿವ್ ಪ್ರಕರಣಗಳಿರುತ್ತವೆ ಎಂದು ಡಾ॥ ತೇಜಸ್ವಿನಿ ರವರು ತಿಳಿಸಿರುತ್ತಾರೆ. ದಿನಾಂಕ: 05-09-2021 ರಂದು ಕೊವ್ಯಾಕ್ಸಿನ್ ಹಾಗೂ ಕೋವಿಶೀಲ್ಡ್ ಲಸಿಕೆಯನ್ನು ವಿಶೇಷ ಅಭಿಯಾನವನ್ನು ನಡೆಸಲಾಗುತ್ತದೆ ಎಂದು ತಿಳಿಸಿರುತ್ತಾರೆ. |
| 3 | ದೊಮ್ಮಲೂರು ಬಯಲು ರಂಗಮಂಟಪದ ಹಿಂಭಾಗದಲ್ಲಿರುವ ಆರ್.ಎಂ.ಯು ಅನ್ನು ಸ್ಥಳಾಂತರಿಸುವ ಬಗ್ಗೆ ಚರ್ಚಿಸಲಾಯಿತು. | ಸದರಿ ವಿಷಯದ ಬಗ್ಗೆ ವಿವರಿಸಲಾಗಿ ಸದರಿ ಆರ್.ಎಂ.ಯು ಅನ್ನು ಸ್ಥಳಾಂತರಿಸಲು ಒಂದು ತಿಂಗಳು ಸಮಯಾವಕಾಶ ಬೇಕಾಗುತ್ತದೆ ಎಂದು ಬೆಸ್ಕಾಂ ನ ಸಹಾಯಕ ಅಭಿಯಂತರರಾದ ಶ್ರೀ. ಮಂಜುನಾಥ್ ರವರು ತಿಳಿಸಿರುತ್ತಾರೆ. ಆದರೆ ಸದರಿ ಕಾಮಗಾರಿಯನ್ನು ಶೀಘ್ರವಾಗಿ ಪೂರೈಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು, ದೊಮ್ಮಲೂರು ಉಪವಿಭಾಗ ರವರು ಕೋರಿರುತ್ತಾರೆ. |
| 4 | 12ನೇ ಮುಖ್ಯರಸ್ತೆ ಹಾಗೂ 5ನೇ ಅಡ್ಡರಸ್ತೆಯಲ್ಲಿ ಒತ್ತುವರಿಯನ್ನು ತೆರವು ಮಾಡಲು ವಾರ್ಡ್ ಸಮಿತಿ ಸದಸ್ಯರು ಕೋರಿರುತ್ತಾರೆ. | ಸದರಿ ಒತ್ತುವರಿಯನ್ನು ಆರೋಗ್ಯ ಇಲಾಖೆ ಮತ್ತು ಇಂಜಿನಿಯರಿಂಗ್ ವಿಭಾಗದಿಂದ ತೆರವುಗೊಳಿಸಲು ಕ್ರಮಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ. |
| 5 | ಇಸ್ರೋ ಬಡಾವಣೆಯಲ್ಲಿ ನೀರಿನ ಸಿಸ್ಟನ್ ಅನ್ನು ಸ್ಥಳಾಂತರಿಸುವ ಬಗ್ಗೆ ವಾರ್ಡ್ ಸಮಿತಿ ಸದಸ್ಯರು ಕೋರಿರುತ್ತಾರೆ. | ಸದರಿ ಸಿಸ್ಟನ್ ಅನ್ನು 15 ದಿನಗಳ ಒಳಗಾಗಿ ಸ್ಥಳಾಂತರಿಸಲಾಗುವುದೆಂದು ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ. |
| 6 | ಪರಮಹಂಸ ರಸ್ತೆಯಲ್ಲಿ ರಸ್ತೆ ಬದಿ ಚರಂಡಿ ಕಾಮಗಾರಿಯನ್ನು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವತಿಯಿಂದ ಕಾಮಗಾರಿ ನಡೆಯುತ್ತಿರುವ ಬಗ್ಗೆ ಚರ್ಚಿಸಲಾಯಿತು ಹಾಗೂ ರಸ್ತೆಯಲ್ಲಿನ ಚರಂಡಿಯಲ್ಲಿರುವ ಹೂಳನ್ನು ಎತ್ತಿ ರಸ್ತೆ ಬದಿಯಲ್ಲಿ ಹಾಕಲಾಗುತ್ತಿದ್ದು, ಇದರಿಂದ ರಸ್ತೆಯಲ್ಲಿ ಮಳೆ ನೀರು ನಿಂತು ಸಾರ್ವಜನಿಕರ ಓಡಾಟಕ್ಕೆ ಹಾಗೂ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿರುತ್ತಾರೆ. | ಈ ಬಗ್ಗೆ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್‌ನ ಸಹಾಯಕ ಅಭಿಯಂತರರು ರವರಿಗೆ ರಸ್ತೆಯಲ್ಲಿ ನೀರು ನಿಲ್ಲದಂತೆ ಚರಂಡಿಯಿಂದ ಮೇಲೆತ್ತಿರುವ ಹೂಳನ್ನು ಆಗಾಗ ಡಂಪಿಂಗ್ ಯಾರ್ಡ್‌ಗೆ ಸಾಗಿಸಿ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಿಕೊಡಲು ತಿಳಿಸಲಾಯಿತು ಹಾಗೂ ಮನೆಗಳು ಮತ್ತು ಅಂಗಡಿಗಳ ಮುಂಭಾಗ ಸಾರ್ವಜನಿಕರಿಗೆ ಅನುಕೂಲವಾಗುವಂತೆ ರ್‍ಯಾಂಪ್ ನಿರ್ಮಿಸಿಕೊಡಲು ತಿಳಿಸಲಾಯಿತು. |

ಕೊನೆಯದಾಗಿ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ್ದ ಅಧಿಕಾರಿಗಳಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ: 112 ದೊಮ್ಮಲೂರು**
**ಬಿ.ಬಿ.ಎಂ.ಪಿ**

**ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ: 112 ದೊಮ್ಮಲೂರು**

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ), ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ಪೂರ್ವ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
6. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ), ಬಿ.ಬಿ.ಎಂ.ಪಿ ರವರ ಅಮೂಲ್ಯ ಅವಗಾಹನೆಗಾಗಿ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.